**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 1101/2011</u>**

ದಿನಾಂಕಃ. **31.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-4 | ಪ್ರಾಸಾ-3 |
|---|---|
| ಹೆಸರು | - ಚಂದ್ರು |
| ತಂದೆ ಹೆಸರು | - ಮರೀಗೌಡ |
| ವಯಸ್ಸು | - **49** |
| ಉದ್ಯೋಗ | - ವ್ಯವಸಾಯ |
| ವಿಳಾಸ | - ನಲ್ಲಹಳ್ಳಿ ಗ್ರಾಮ |

**ಮುಖ್ಯವಿಚಾರಣೆ : ಮಾನ್ಯ ಪ್ರಭಾರ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

ಈಗ **13-14** ವರ್ಷಗಳ ಹಿಂದೆ ಸಂಜೆ **5** ರಿಂದ **6** ಗಂಟೆ ಸಮಯದಿಲ್ಲಿ ಚಾ.ಸಾ. **1** ರವರು ನನಗೆ ಮತ್ತು ಊರಿನ ಮುಖಂಡರಿಗೆ ಆಕೆ ದನ ಮೇಯಿಸುವಾಗ ಆರೋಪಿತರಾದ ಆನಂದ್, ಮಹದೇವ ಮತ್ತು ಮಹದೇವ ಎನ್ನುವವರು ಚಾ.ಸಾ. **1** ರವರ ಕೈ ಹಿಡಿದು ಎಳೆದಾಡಿ ತೊಂದರೆ ಕೊಟ್ಟರು ಎಂದು ಹೇಳಿದರು.

ನಂತರ ಚಾ.ಸಾ. **1** ರವರು ದೂರು ಕೊಟ್ಟರು. ಚಾ.ಸಾ. **1** ರವರು ನನಗೆ ಸಾಕ್ಷಿಯಾಗಿ ಎಂದು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ರವರು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>

ದಿ. **07.09.2011** ರಂದು ಮದ್ಯಾಹ್ನ ಸುಮಾರು **4** ಗಂಟೆ ಸಮಯದಲ್ಲಿ ನಾನು ಮನೆಯ ಬಳಿ ಇದ್ದಾಗ ನಮ್ಮ ಗ್ರಾಮದ ಮುತ್ತು ಮಾದಶೆಟ್ಟಿಯ ಹೆಂಡತಿ ಶ್ರೀಮತಿ ರಾಜಮ್ಮ ಗಾಬರಿಯಿಂದ ಬಂದಳು, ನಾನು ಏನು ಸಮಾಚಾರ ಎಂದು ಕೇಳಿದೆ, ಆಗ ಆಕೆ ನಾನು ಇದೇ ದಿನ ನನ್ನ ಹೊಲದ ಬಳಿ ಮದ್ಯಾಹ್ನ **3** ಗಂಟೆ ಸವಬುಯದಲ್ಲಿ ದನ ಮೇಯಿಸುತ್ತಿದ್ದಾಗ ಗ್ರಾಮ ಆನಂದ್ ಬಿನ್. ಹೊನ್ನೇಗೌಡ, ಮಹದೇವ ಬಿನ್. ಮಹದೇವಯ್ಯ, ಮಹದೇವ ಬಿನ್. ಈಗೇಗೌಡರವರು ನನ್ನ ಬಳಿ ಬಂದು ಏನೇ ಸೂಳೇ ನನ್ನ ಹತ್ತಿರಕ್ಕೆ ಬಾರೇ ಎಂದು ಕರೆದರು, ಆಗ ಅವರಿಗೆ ಹೀಗೆ ಕರೀಬೇಡಿ ಎಂದು ಹೋಗಿ ಎಂದಿದ್ದಕ್ಕೆ **3** ಜನರು ನನ್ನ ಕೈ ಮತ್ತು ಸೀರೆಯನ್ನು ಹಿಡಿದು ಎಳೆದಾಡಲು ಶುರುಮಾಡಿದರು, ನಾನು ಕಾಪಾಡಿ ಎಂದು ಜೋರಾಗಿ ಕೂಗಿಕೊಂಡಾಗ ಅಲ್ಲೆ ಪಕ್ಕದಲ್ಲಿದ್ದ ಕೃಷ್ಣ ಮತ್ತು ಪುಟ್ಟನ್ಮ್ಮ ರವರು ಓಡಿ ಬಂದು ಇವರಿಗೆಲ್ಲಾ ಬೈದು ನನ್ನಿಂದ ಬಿಡಿಸಿ ಕಳುಹಿಸಿದರು, ಅವರೆಲ್ಲಾ ಹೋಗುವಾಗ ನಿನ್ನ ಇವತ್ತೆಲ್ಲಾ ನಾಳೆ ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಹೊರಟುಹೋದರು ಎಂದು ತಿಳಿಸಿದಳು, ನಾನು ಇವರೆಲ್ಲಾ ಪೋಲಿ ಹುಡುಗರು ಇವರು ನನ್ನ ಮಾತು ಕೇಳುವುದಿಲ್ಲ ನೀನು ಪೋಲಿಸರಿಗೆ ದೂರು ನೀಡಿ ಎಂದು ಹೇಳಿ ಕಳುಹಿಸಿದೆ, ಈ ವಿಚಾರವನ್ನು ನಿನ್ನ ಗಂಡನಿಗೆ ಹೇಳು ಅಂದಿದ್ದಕ್ಕೆ ಈ ಕೂಡಲೇ ಅವರಿಗೆ ತಿಳಿಸುತ್ತೇನೆ ಎಂದು ಹೇಳಿದಳು, ಹೆಣ್ಣು ಒಬ್ಬಬ್ಬರಾಗಿ ಜಮೀನಿನ ಬಳಿ ಇದ್ದಾಗ ಮೇಲ್ಕಂಡ ಆರೋಪಿತರು ಉದ್ದೇಶಪೂರ್ವಕವಾಗಿ ಆಕೆಗೆ ಬಾಯಿಗೆ ಬಂದಂತೆ ಸೂಳೇ ಇತ್ಯಾದಿ ಬೈದು ಕೈಹಿಡಿದು , ಬಟ್ಟೆ ಹರಿದು ಎಳೆದಾಡಿ ಹೋಗುವಾಗ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ **3** ಜನರ ಮೇಲೆ ಕಾನೂನು ರೀತ್ಯಾ ಕ್ರಮ ಜರುಗಿಸಲು ಕೋರಿಕೊಂಡೆ ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ.

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ.ಎಲ್.ಎ.ಡಿ.ಸಿ. ವಕೀಲರಿಂದಃ**

ದೂರು ಕೊಡುವ ಮೊದಲು ಮಾತುಕತೆ , ಸಮಾಲೋಚನೆ ಮಾಡಿ ಪಂಚಾಯಿತಿ ಮಾಡಿ ದೂರು ಕೊಡಲಾಗಿದೆ ಎಂದರೆ ಊರು ಮುಖಂಡರಿಗೆ ತಿಳಿಸಿ ದೂರು ಕೊಡಲಾಗಿದೆ. ಚಾ.ಸಾ. 1 ರವರು ಮಾಡಿದ ಆರೋಪವನ್ನು ನಾನು

ಖುದ್ದಾಗಿ ಪರಿಶೀಲನೆ ಮಾಡಿಲ್ಲ. ಚಾ.ಸಾ. 1 ರವರು ನೀಡಿದ ಹೇಳಿಕೆಯ ಮೇಲೆ ನಾನು ಹೇಳಿಕೆ ನೀಡಿದ್ದೇನೆ. ಬಿಡಿಸಿ ಕಳುಹಿಸಿದರು ಎಂದರೆ ಆರೋಪಿತರಿಂದ ಬಿಡಿಸಿ ಕಳುಹಿಸಿದರು. ಯಾವುದೇ ಘಟನೆ ನಡೆದಿಲ್ಲ ಮತ್ತು ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಬಹಳ ದಿನಗಳು ಆಗಿದ್ದರಿಂದ ನಿಖರವಾಗಿ ನೆನಪಿಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ನಾನು ಹೇಳಿದ ಮೇರೆಗೆ ಚಾ.ಸಾ. 1 ರವರು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಚಾ.ಸಾ. 1 ರವರ ಕೋರಿಕೆಯ ಮೇರೆಗೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಆರೋಪಿತರು ಚಾ.ಸಾ. 1 ರವರಿಗೆ ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ , ಕೈ ಮತ್ತು ಸೀರೆ ಹಿಡಿದು ಎಳೆದಾಡಿರುವುದಿಲ್ಲ, ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನೆಯನ್ನು ನೋಡಿರುವುದಿಲ್ಲ. ಆರೋಪಿತರನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬೇಕೆಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 1ನೇ ಆರೋಪಿಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು, ಆದರೆ ಪ್ರಕರಣ 2011 ನೇ ಸಾಲಿನ ಪ್ರಕರಣ ಆಗಿರುವುದರಿಂದ ಮತ್ತು ಸಕಾರಣ ಇಲ್ಲದೇ ಇರುವುದರಿಂದ ಸಮಯಾವಕಾಶವನ್ನು ತಿರಸ್ಕರಿಸಲಾಯಿತು)

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**